ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಗುಂಡ್ಲುಪೇಟೆ

ದಿನಾಂಕ: 21 ನೇ ನವೆಂಬರ್ ಮಾಹೆ, 2023

ಉಪಸ್ಥಿತರು

ಶ್ರೀ ಶಿವಕುಮಾರ ಜಿ. ಜೆ., ಬಿ.ಎ., ಎಲ್.ಎಲ್.ಬಿ.,
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ., ಗುಂಡ್ಲುಪೇಟೆ

ಕ್ರಿಮಿನಲ್ ಮೊಕದ್ದಮೆ ಸಂಖ್ಯೆ :892/2022

ಫಿರ್ಯಾದುದಾರರು	:	**ಶ್ರೀ ರಾಜಪ್ಪ ಕೆ.ಪಿ** ಬಿನ್ ಲೇಟ್ ಪುಟ್ಟಬಸಪ್ಪ 60 ವರ್ಷ ವಯಸ್ಸು ವಾಸಃ ಕಗ್ಗಳ ಗ್ರಾಮ ತೆರಕಣಾಂಬಿ ಹೋಬಳಿ ಗುಂಡ್ಲುಪೇಟೆ ತಾಲ್ಲೂಕು. [**ಪರವಾಗಿ** : ಶ್ರೀ ಜಿ.ಆರ್, ವಕೀಲರು]
		ವಿರುದ್ಧ
ಆರೋಪಿ	:	**ಶ್ರೀ ಹೆಚ್. ಕೆ ಎಹ್ತೆಷಾಮುಲ್ ಹಖ್** ಬಿನ್ ಕಾಮಿಲ್ ನಹೀಮುಲ್ ಹಖ್ 45 ವರ್ಷ ವಯಸ್ಸು

ಹೆಚ್‌ಕೆಬಿ ತರಕಾರಿ ಅಂಗಡಿಯ ಮಾಲೀಕ
ಚಾಮರಾಜನಗರ ರಸ್ತೆ
ಗುಂಡ್ಲುಪೇಟೆ ಪಟ್ಟಣ.
[**ಪರವಾಗಿ :** ಶ್ರೀ ಕೆ.ಆರ್.ಕೆ, ವಕೀಲರು]

(ಶಿವಕುಮಾರ ಜಿ.ಜೆ)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.

ತೀರ್ಪು

ಫಿರ್ಯಾದಿ, ಆರೋಪಿಯು **ಲಿಖಿತ ವರ್ಗಾವಣಾ ಅಧಿನಿಯಮ ಕಲಂ** 138 ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿದ್ದಾನೆಂದು ಆರೋಪಿಸಿ ನ್ಯಾಯಾಲಯಕ್ಕೆ ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಡಿ ಖಾಸಗಿ ಫಿರ್ಯಾದನ್ನು ಸಲ್ಲಿಸಿರುತ್ತಾರೆ.

2. **ಫಿರ್ಯಾದಿಯಲ್ಲಿನ ಸಂಗತಿಗಳ ಸಂಕ್ಷಿಪ್ತ ಸಾರಾಂಶ ಈ ಕೆಳಕಂಡಂತೆ ಇದೆಃ**

ಫಿರ್ಯಾದುದಾರನು ಮತ್ತು ಆರೋಪಿಗಳಿಬ್ಬರೂ ಪರಸ್ಪರ ಚಿರಪರಿಚಿತರಾಗಿದ್ದು. ಈ ಪರಿಚಯದ ಆಧಾರದ ಮೇಲೆ ಆರೋಪಿಯು ದಿನಾಂಕಃ 04.04.2022 ರಂದು ರೂ.6,00,000/- ಗಳನ್ನು ತನ್ನ ದರದು ನಿಮಿತ್ತ ಕೈಸಾಲ

ತೀರಿಸಲು ಒಂದು ತಿಂಗಳ ವಾಯಿದೆಯವರೆಗೆ ಸಾಲ ಕೊಡುವಂತೆ ಕೇಳಿಕೊಂಡು ಫಿರ್ಯಾದುದಾರರಿಂದ ಸಾಲ ಪಡೆದುಕೊಂಡಿದ್ದು, ಫಿರ್ಯಾದುದಾರರು ಆ ಸಾಲದ ಹಣವನ್ನು ವಾಪಸ್ಸು ಕೇಳಿದಾಗ ಅದರ ಮರುಪಾವತಿಗಾಗಿ ಆರೋಪಿಯು ದಿನಾಂಕಃ 04.06.2022 ಎಂದು ನಮೂದಿಸಿದ ಸಿಂಡಿಕೇಟ್ ಬ್ಯಾಂಕ್ ಶಾಖೆಗೆ ಸೇರಿದ ಚೆಕ್ ಸಂಖ್ಯೆಃ 792622 ರೂ.6,00,000/- ಗಳ ಚೆಕ್‌ನ್ನು ಫಿರ್ಯಾದಿಗೆ ಕೊಟ್ಟಿದ್ದು, ಅದನ್ನು ಕೆನರಾ ಬ್ಯಾಂಕ್, ಗುಂಡ್ಲುಪೇಟೆ ಶಾಖೆಗೆ ನಗದೀಕರಣಕ್ಕಾಗಿ ಹಾಕಲಾಗಿ ಆರೋಪಿಗೆ ಸೇರಿದ ಖಾತೆಯು "Account Closed" ಎಂದು ಹಿಂಬರಹದೊಂದಿಗೆ ಚೆಕ್ ದಿನಾಂಕಃ 22.08.2022 ರಂದು ವಾಪಸ್ಸು ಬಂದಿರುತ್ತದೆ. ನಂತರ ಫಿರ್ಯಾದುದಾರರು 15 ದಿನಗಳೊಳಗೆ ತಮ್ಮ ಹಣವನ್ನು ಮರುಪಾವತಿಸುವಂತೆ ತಮ್ಮ ವಕೀಲರ ಮೂಲಕ ದಿನಾಂಕಃ 30.08.2022 ರಂದು ನೋಟಿಸ್ ಕಳುಹಿಸಿರುತ್ತಾರೆ, ಅದನ್ನು ಆರೋಪಿಯು ತೆಗೆದುಕೊಳ್ಳದೇ ಇರುವ ಕಾರಣದಿಂದ ಅಂಚೆ ಇಲಾಖೆಯವರು "Addressee not in Station" ಎಂಬ ಹಿಂಬರಹದೊಂದಿಗೆ ದಿನಾಂಕಃ 07.09.2022 ರಂದು ವಾಪಸ್ಸು ಬಂದಿರುತ್ತದೆ, ಈ ಕಾರಣದಿಂದ ಆರೋಪಿಗೆ ನೋಟಿಸ್‌ನ ವಿಚಾರ ಗೊತ್ತಿದ್ದರೂ ಹಣವನ್ನು ವಾಪಸ್ಸು ಮಾಡಿರುವುದಿಲ್ಲ ಮತ್ತು ಯಾವುದೇ ಉತ್ತರವನ್ನು ನೀಡಿರುವುದಿಲ್ಲವೆಂದು ಹಾಗೂ ಆರೋಪಿತನು ತನ್ನ ಖಾತೆಯನ್ನು ಮುಚಿದ್ದರೂ ಸಹ ಮೋಸ ಮಾಡುವ ಉದ್ದೇಶದಿಂದ ಫಿರ್ಯಾದುದಾರನಿಗೆ ಚೆಕ್‌ನ್ನು ನೀಡಿ ಆರೋಪಿಯು **ಲಿಖಿತ ವರ್ಗಾವಣಾ ಅಧಿನಿಯಮ ಕಲಂ 138** ರಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುತ್ತಾರೆಂದು

ದಂಡ ಪ್ರಕ್ರಿಯಾ ಸಂಹಿತೆ ಕಲಂ 200 ರಡಿ ಆರೋಪಿಯ ವಿರುದ್ಧ ಖಾಸಗಿ ಫಿರ್ಯಾದನ್ನು ಸಲ್ಲಿಸಿರುತ್ತಾರೆ.

3. **ದಂಡ ಪ್ರಕ್ರಿಯಾ ಸಂಹಿತೆ ಕಲಂ** 200 ರಡಿಯಲ್ಲಿ ಸಲ್ಲಿಸಿದ ಫಿರ್ಯಾದಿನ ಸಂಜ್ಞೇಯತೆಯನ್ನು ತೆಗೆದುಕೊಂಡ ನಂತರ ಫಿರ್ಯಾದುದಾರನ ಪ್ರಮಾಣ ಪೂರ್ವ ಹೇಳಿಕೆಯನ್ನು ದಾಖಲು ಮಾಡಿಕೊಂಡು ಆರೋಪಿತನ ಮೇಲಿನ ಆರೋಪಗಳಿಗೆ ಸಂಬಂಧಿಸಿದಂತಹ ಅಂಶಗಳು ಮೇಲ್ನೋಟಕ್ಕೆ ಕಂಡುಬಂದ ಕಾರಣದಿಂದ ಕ್ರಿಮಿನಲ್ ಪ್ರಕರಣವನ್ನು ನೋಂದಾಣಿ ಮಾಡಿ ಆರೋಪಿಗೆ ಸಮನ್ಸ್ ಹೊರಡಿಸಲಾಯಿತು.

4. ಆರೋಪಿತನಿಗೆ ಸಮನ್ಸ್ ಜಾರಿಯಾದ ನಂತರ ಆರೋಪಿತನು ತನ್ನ ವಕೀಲರ ಮೂಲಕ ಹಾಜರಾಗಿ ನ್ಯಾಯಾಲಯದ ಜಾಮೀನು ಪಡೆದುಕೊಂಡಿರುತ್ತಾನೆ. ನಂತರ Substance of Accusation ಅನ್ನು ದಿಃ25.01.2023 ರಂದು ಓದಿ ಹೇಳಲಾಗಿ ಆರೋಪಿಯು ತಾನು ಯಾವುದೇ ತಪ್ಪು ಮಾಡಿಲ್ಲವೆಂದು ಪ್ರಕರಣದ ವಿಚಾರಣೆಯಾಗಬೇಕೆಂದು ಹೇಳಿದ್ದರಿಂದ ವಿಚಾರಣೆಗೆ ಪ್ರಕರಣವನ್ನು ಕೈಗೆತ್ತಿಕೊಳ್ಳಲಾಗಿರುತ್ತದೆ.

5. ಫಿರ್ಯಾದಿಯು ತನ್ನ ಪ್ರಕರಣಕ್ಕೆ ಪೂರಕವಾಗಿ ಫಿರ್ಯಾದುದಾರರಾದ ರಾಜಪ್ಪ ಕೆ.ಪಿ ರವರನ್ನು ಫ್ರಾಸಾ–1 ಎಂಬುದಾಗಿ ವಿಚಾರಣೆ ಮಾಡಿ ನಿಪಿ–1 ರಿಂದ ನಿಪಿ–11 ರವರೆಗೆ ದಾಖಲೆಗಳನ್ನು ಹಾಜರುಪಡಿಸಿ ನಿಶಾನೆಗಳಾಗಿ ಗುರುತಿಸಿಕೊಂಡು ತನ್ನ ಪರ

ವಿಚಾರಣೆಯನ್ನು ಮುಕ್ತಾಯಮಾಡಿಕೊಂಡು ನಂತರ ಆರೋಪಿಯ ವಿರುದ್ಧ ಕಂಡುಬಂದ ಸಾಕ್ಷ್ಯದ ಬಗ್ಗೆ **ದಂಡ ಪ್ರಕ್ರಿಯಾ ಸಂಹಿತೆ ಕಲಂ 313** ಅಡಿಯಲ್ಲಿ ದಿಃ 25.01.2023 ರಂದು ಆರೋಪಿಯ ಹೇಳಿಕೆಯನ್ನು ದಾಖಲಿಸಿಕೊಂಡ ಸಂದರ್ಭದಲ್ಲಿ ಆರೋಪಿಯು ತನ್ನ ಮೇಲಿನ ಸಾಕ್ಷ್ಯವನ್ನು ಅಲ್ಲಗಳೆದು ತನ್ನ ಪರವಾಗಿ ಪ್ರತಿರಕ್ಷಣಾ ವಿಚಾರಣೆ ಇದೆ ಎಂದು ಹೇಳಿ ತನ್ನ ಪರವಾಗಿ ತಾನೇ ಡಿಡಬ್ಲ್ಯೂ-1 ಎಂಬುದಾಗಿ ವಿಚಾರಣೆ ಮಾಡಿ ಪ್ರತಿರಕ್ಷಣಾ ಸಾಕ್ಷ್ಯ ನುಡಿದಿರುತ್ತಾರೆ. ನಂತರ ಸಾಕ್ಷಿಯು ಪಾಟೀ ಸವಾಲಿಗೆ ಒಳಪಡದೇ ಗೈರು ಹಾಜರಾಗಿರುತ್ತಾರೆ, ನಂತರ ಸದರಿ ಪ್ರಕರಣದಲ್ಲಿ ವಿಚಾರಣೆಯನ್ನು ಮುಕ್ತಗೊಳಿಸಲಾಯಿತು.

6. ಪ್ರಕರಣದ ಸಂಗತಿಗಳನ್ನು ಹಾಗೂ ಕಡತದ ದಾಖಲಾತಿಗಳನ್ನು ಪರಿಶೀಲಿಸಿದ ನಂತರ ಪ್ರಕರಣದ ನ್ಯಾಯೋಚಿತ ಇತ್ಯರ್ಥಕ್ಕಾಗಿ ನ್ಯಾಯಾಲಯದ ಪರಿಗಣನೆಗೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

1. ಆರೋಪಿತನು ದಸ್ತಾವೇಜು **ಲಿಖಿತ ವರ್ಗಾವಣಾ ಅಧಿನಿಯಮ ಕಲಂ** 138 ರ ಅಡಿಯಲ್ಲಿ ದಂಡನೀಯವಾದ ಅಪರಾಧವನ್ನು ಎಸಗಿದ್ದಾನೆ ಮತ್ತು ಫಿರ್ಯಾದುದಾರರಿಂದ ಕಾನೂನುಬದ್ಧ ಸಾಲದ ಹಣವನ್ನು ಪಡೆದುಕೊಂಡಿದ್ದಾನೆ ಎಂಬುದನ್ನು ಫಿರ್ಯಾದುದಾರನು ಸಂಶಯಾತೀತವಾಗಿ ಸಾಬೀತುಪಡಿಸುತ್ತಾರೆಯೇ?

2. ಯಾವ ಆದೇಶ?

7. ಉಭಯ ಪಕ್ಷಗಾರರ ವಕೀಲರ ವಾದವನ್ನು ಆಲಿಸಲಾಯಿತು, ನಂತರ ಪ್ರಕರಣದ ಬಗ್ಗೆ ಈ ಮೇಲ್ಕಂಡಂತೆ ಉದ್ಭವಿಸಿದ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಲಾಗಿದೆ.

ಅಂಶ-1 – **ಸಕಾರಾತ್ಮಕವಾಗಿ**

ಅಂಶ-2 – ಅಂತಿಮ ಆದೇಶದಂತೆ.

ಕಾ ರ ಣ ಗ ಳು

8.**ಅಂಶ-1**: ಫಿರ್ಯಾದುದಾರರು ಈ ಮೇಲ್ಕಂಡ ಪ್ರಕರಣವನ್ನು ಸಂಶಯಾತೀತವಾಗಿ ರುಜುವಾತುಪಡಿಸುವ ಉದ್ದೇಶದಿಂದ ತನ್ನನ್ನು ತಾನು ಪಿಡಬ್ಲ್ಯೂ-1 ಎಂದು ವಿಚಾರಣೆಗೆ ಒಳಗಾಗಿ ತನ್ನ ಮುಖ್ಯ ವಿಚಾರಣೆಯಲ್ಲಿ ಶಪಥ ಪತ್ರದ ರೂಪದಲ್ಲಿ ತನ್ನ ಫಿರ್ಯಾದುವಿನಲ್ಲಿ ತಿಳಿಸಿರುವ ಅಂಶಗಳನ್ನು ಯಥಾವತ್ತಾಗಿ ಪುನರಾವರ್ತಿಸಿರುತ್ತಾರೆ. ತನ್ನ ಮುಖ್ಯ ವಿಚಾರಣೆಯ ವೇಳೆಯಲ್ಲಿ ಆರೋಪಿಯು ಫಿರ್ಯಾದುದಾರರನ್ನು ಭೇಟಿಯಾಗಿ ತುರ್ತಾಗಿ ತನ್ನ ಕುಟುಂಬದ ತುರ್ತು ಅವಶ್ಯಕತೆ ಮತ್ತು ಇತರೇ ಗೃಹಕೃತ್ಯಗಳ ಉದ್ದೇಶದಿಂದ ಹಣದ ಅವಶ್ಯಕತೆ ಇದೆ ಎಂದು ಹೇಳಿ ರೂ.6,00,000/- ಗಳನ್ನು ಕೈಸಾಲವಾಗಿ ಪಡೆದುಕೊಂಡು, ನಂತರ ದಿನಾಂಕಃ 05.05.2022 ರಂದು ಆರೋಪಿತನು ಸಾಲದ ಹಣದ ಮರುಪಾವತಿಗಾಗಿ ತನ್ನ ಉಳಿತಾಯ ಖಾತೆ ಇರುವ ತನಗೆ ಸೇರಿದ ಸಿಂಡಿಕೇಟ್ ಬ್ಯಾಂಕ್ ಶಾಖೆಗೆ ಸೇರಿದ ದಿಃ 04.06.2022 ರ ಚೆಕ್ ನಂ.792622 ರೂ.6,00,000/- ರ ಮುಖಬೆಲೆಯ ಚೆಕ್ ಅನ್ನು ನೀಡಿ ಚೆಕ್‌ನಲ್ಲಿ ನಮೂದಿಸಿರುವ ದಿನಾಂಕದಂದು ತಾನು ಹಣವನ್ನು ಬ್ಯಾಂಕ್‌ನಲ್ಲಿ ಹಾಜರುಪಡಿಸಿ ಹಣ ಪಡೆಯುವಂತೆ ಹೇಳಿ ಸದರಿ ಚೆಕ್ ಅನ್ನು

ಹಾಜರುಪಡಿಸಿ ನಿಪಿ–1 ಎಂದು ಗುರುತಿಸಿಕೊಂಡಿದ್ದಾರೆ. ನಂತರ ಸದರಿ ಚೆಕ್ ಅನ್ನು ಆರೋಪಿಯ ಕೋರಿಕೆಯಂತೆ ಫಿರ್ಯಾದುದಾರರು ತನ್ನ ಉಳಿತಾಯ ಖಾತೆ ಇರುವ ಬ್ಯಾಂಕ್‌ಗೆ ಚೆಕ್ ಅನ್ನು ಹಾಜರು ಪಡಿಸಿ ತದನಂತರ ವಿಚಾರಿಸಿದಾಗ, ಆರೋಪಿಯ **"ಖಾತೆಯನ್ನು ಮುಚ್ಚಲಾಗಿದೆ"** ಎಂದು ದಿಃ 22.08.2022 ರಂದು ವಾಪಸ್ಸಾದ್ದ ಬಗ್ಗೆ ಹಿಂಬರಹವನ್ನು ನೀಡಿದ್ದಾರೆಂದು ಹೇಳಿ ಅದನ್ನು ಸಮರ್ಥಿಸುವ ನಿಟ್ಟಿನಲ್ಲಿ ಹಿಂಬರಹವನ್ನು ಹಾಜರುಪಡಿಸಿದ್ದು, ಅದನ್ನು ನಿಪಿ–2 ಎಂದು ಗುರುತಿಸಿಕೊಂಡಿರುತ್ತಾರೆ. ಹಾಗೆಯೇ ಮುಂದುವರಿದು ಆರೋಪಿಯು ನೀಡಿದ ಚೆಕ್ ಅಮಾನ್ಯಗೊಂಡು ಬ್ಯಾಂಕ್ ನವರು ನೀಡಿದ ಹಿಂಬರಹದ ನಂತರ ಸದರಿ ಚೆಕ್ ನಗದಾಗದೇ ಹಿಂತಿರುಗಿದ ಕಾರಣ ದಿಃ 30.08.2022 ರಂದು ಆರೋಪಿಗೆ ನೋಂದಾಯಿತ ಅಂಚೆಯ ಮೂಲಕ ನೋಟೀಸನ್ನು ಆರೋಪಿಯ ವಿಳಾಸಕ್ಕೆ ಕಳುಹಿಸಿದ್ದು, ಸದರಿ ನೋಟೀಸ್ ವಿಚಾರ ತಿಳಿದಿದ್ದು, ಅದನ್ನು ಪಡೆಯದೇ ದಿನಾಂಕ 07.09.2022 ರಂದು ಆರೋಪಿತನು ನೋಟೀಸನ್ನು ಪಡೆಯದ ಕಾರಣ "address is not in station" ಎಂದು ವಾಪಸ್ಸಾಗಿದ್ದು, ಈ ಕಾರಣದಿಂದ ಆರೋಪಿತನು ನೋಟೀಸ್ ವಿಚಾರ ತಿಳಿದಿದ್ದರೂ ಸಹ ಪಡೆದುಕೊಳ್ಳದ ಕಾರಣ ನೋಟೀಸ್ ಖುದ್ದು ಜಾರಿಯಾಗಿರುತ್ತದೆ ಎಂಬ ಬಗ್ಗೆ ಈ ನೋಟೀಸ್‌ನ ಕಛೇರಿ ಪ್ರತಿಯನ್ನು ನಿಪಿ–3 ಎಂದು, ಒಂದು ಅಂಚೆ ಲಕೋಟೆಯನ್ನು ನಿಪಿ–4 ಎಂದು ಮತ್ತು ಅದರೊಳಗಿನ ನೋಟೀಸ್ ಪ್ರತಿಯನ್ನು ನಿಪಿ–4(ಎ) ಎಂದು ಗುರುತಿಸಿಕೊಂಡಿರುತ್ತಾರೆ. ಈ ವಿಚಾರಗಳು ಆರೋಪಿಗೆ ತಿಳಿದಿದ್ದರೂ ಸಹ ಯಾವುದೇ

ಸಾಲದ ಹಣವನ್ನು ಮರುಪಾವತಿ ಮಾಡಿರುವುದಿಲ್ಲ ಎಂದು, ಫಿರ್ಯಾದಿಯು ತನ್ನ ಫಿರ್ಯಾದಿನಲ್ಲಿ ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು , ಅದನ್ನು ಸಮರ್ಥಿಸುವ ಸಲುವಾಗಿ ದಾಖಲೆಗಳನ್ನು ಹಾಜರಿಸಿರುತ್ತಾರೆ.

9. ಒಟ್ಟಾರೆ ಮೇಲ್ಕಂಡ ನಿಪಿ-1 ರಿಂದ ನಿಪಿ-4 ದಾಖಲಾತಿಗಳನ್ನು ಗಮನಿಸಿದಾಗ ಆರೋಪಿಯು ರೂ.6,00,000/- ಗಳನ್ನು ಕೇಳಿದ್ದು, ಫಿರ್ಯಾದುದಾರನು ಆರೋಪಿಗೆ ಹಣವನ್ನು ಸಾಲವಾಗಿ ನೀಡಿರುವುದಾಗಿ ಮತ್ತು ಸಾಲದ ಹಣಕ್ಕಾಗಿ ಆರೋಪಿ ನಿಪಿ-1 ರ ಚೆಕ್ಕನ್ನು ನೀಡಿದ್ದಾಗಿ ಮತ್ತು ಚೆಕ್ ಅನ್ನು ನಗದೀಕರಿಸಿಕೊಳ್ಳಲು ಬ್ಯಾಂಕ್‌ಗೆ ಫಿರ್ಯಾದುದಾರನು ಹಾಜರುಪಡಿಸಿದಾಗ, ದಿಃ 22.08.2022 ರಂದು ಆರೋಪಿಯ "**ಖಾತೆಯನ್ನು ಮುಚ್ಚಲಾಗಿದೆ**" ಎಂದು ನಿಪಿ-2 ರ ರೀತ್ಯಾ ಬ್ಯಾಂಕ್ ನಿಂದ ಒಂದು ಹಿಂಬರಹವನ್ನು ನೀಡಿದ್ದಾರೆಂದು ಮತ್ತು ಸದರಿ ಚೆಕ್ ನಗದಾಗದೇ ಹಿಂತಿರುಗಿ ಬಂದಿದೆ ಎಂಬುದು ಕಂಡುಬರುತ್ತದೆ. ಅಷ್ಟೇ ಅಲ್ಲದೇ ನಿಪಿ-3 ಮತ್ತು 4 ರ ದಾಖಲೆಗಳನ್ನು ಪರಿಶೀಲಿಸಿದಾಗ ಚೆಕ್ ನಗದಾಗದೇ ಹಿಂತಿರುಗಿದ ನಂತರ ಫಿರ್ಯಾದುದಾರರು ಆರೋಪಿಗೆ ತಿಳುವಳಿಕೆ ಪತ್ರ ಕಳುಹಿಸಿದ ಬಗ್ಗೆ ಮತ್ತು ನಿ.ಪಿ 3 ರ ತಿಳುವಳಿಕೆ ಪತ್ರವು ಜಾರಿಗೆ ಹೋದಾಗ ಆರೋಪಿಯು ತಿಳಿದು ತೆಗೆದುಕೊಳ್ಳದ ಕಾರಣ ನಿಪಿ.4 ರಂತೆ ಜಾರಿಯಾಗಿರುತ್ತದೆ. ಈ ಕಾರಣದಿಂದ ಆರೋಪಿಯ ವಿರುದ್ಧ **ಲಿಖಿತಗಳ ವರ್ಗಾವಣೆಯ ಅಧಿನಿಯಮದ ಕಲಂ 138** ರಡಿ ಶಿಕ್ಷಾರ್ಹವಾದ ಅಪರಾಧಕ್ಕಾಗಿ ಫಿರ್ಯಾದುಸಲ್ಲಿಸುವ ಮೊದಲು ಏನೆಲ್ಲಾ ಕ್ರಮಗಳನ್ನು ಕೈಗೊಳ್ಳಬೇಕೋ, ಆ ಎಲ್ಲಾ ಕ್ರಮಗಳನ್ನು ಫಿರ್ಯಾದುದಾರನು ತೆಗೆದುಕೊಂಡಿದ್ದಾರೆಂಬುದು ಕಂಡುಬರುತ್ತದೆ.

10. ಈ ಮೇಲ್ಕಂಡ ಎಲ್ಲಾ ಅಂಶಗಳ ಮೂಲಕ ಫಿರ್ಯಾದುದಾರರು ತನ್ನ ಮೇಲಿನ ಹೊಣೆಗಾರಿಕೆಯನ್ನು ರುಜುವಾತುಪಡಿಸಿರುವುದರಿಂದ ಆರೋಪಿತನ ಮೇಲೆ ರುಜುವಾತುಪಡಿಸುವ ಭಾರವು ವರ್ಗಾವಣೆಗೊಂಡಿರುತ್ತದೆ. ಈ ರೀತಿ ಹೊರಿಸಲಾದ ಆರೋಪಗಳನ್ನು ಸಂಗತಿಗಳ ಆಧಾರದ ಮೇಲೆ ಅಥವಾ ಸಾಕ್ಷ್ಯಾದಾರಗಳ ಮೂಲಕ ಹಾಗೂ ಕಾನೂನಿನ ಸಹಾಯದಿಂದಲೂ ರುಜುವಾತುಪಡಿಸಬೇಕಾಗುತ್ತದೆ.

11. **ಲಿಖಿತ ವರ್ಗಾವಣೆಯ ಅಧಿನಿಯಮದ ಕಲಂ 139** ರಂತೆ ಆರೋಪಿ ಅನ್ಯತಾ ಸಾಬೀತು ಪಡಿಸಿದ ಹೊರತು ಚೆಕ್ ಧಾರಕನು ಸದರಿ ಚೆಕ್‌ಅನ್ನು ಸಾಲ ಅಥವಾ ಇನ್ನಿತರ ಹೊಣೆಗಾರಿಕೆಯ ಸಂಪೂರ್ಣ ಅಥವಾ ಭಾಗಶಃ ತೀರುವಳಿಗೆ ಹಣವನ್ನು ಪಡೆದಿದ್ದಾನೆಂದು ಪೂರ್ವಭಾವಿಸಬಹುದಾಗಿರುತ್ತದೆ. ಅದೇ ರೀತಿ ಈ ಪೂರ್ವಭಾವನೆಯು ಸಂಗತಿಗಳ ಮೇಲೆ ರುಜುವಾತುಪಡಿಸುವುದಲ್ಲದೆ ಕಾನೂನಾತ್ಮಕ ಪೂರ್ವಭಾವನೆಯನ್ನು ಸಹ ರುಜುವಾತು ಪಡಿಸಬೇಕಾಗುತ್ತದೆ. ಈ ಕಾನೂನಾತ್ಮಾಕ ರುಜುವಾತುಪಡಿಸುವ ಪೂರ್ವಭಾವನೆಯನ್ನು ನ್ಯಾಯಾಲಯವು ಎತ್ತಿದ ನಂತರ ಆ ಪೂರ್ವಭಾವನೆಗಳನ್ನು ರುಜುವಾತುಪಡಿಸುವ (Rebuttal) ಹೊಣೆಗಾರಿಕೆ ಆಯಾ ಕೇಸಿನ ಸಂಗತಿಗೆ ತಕ್ಕಂತೆ ಆರೋಪಿಯು ರುಜುವಾತು ಪಡಿಸಬೇಕಾಗುತ್ತದೆ. ಈ ರುಜುವಾತು ಪಡಿಸುವಾಗ ಅಂತಹ ಸಾಕ್ಷ್ಯವು ಸಂಪೂರ್ಣತೆಯಿಂದ ಕೂಡಿರಬೇಕು ಮತ್ತು ಕೇವಲ ವಿವರಣೆ ಕೊಡುವ ಮೂಲಕ ಕಾನೂನಾತ್ಮಕ ಪೂರ್ವಭಾವನೆಯನ್ನು ಖಂಡಿಸುವಂತಾಗುವುದಿಲ್ಲ. ಆರೋಪಿಯು ಸದರಿ ಪೂರ್ವಭಾವನೆಯನ್ನು ಸುಸಂಬಂಧ ಸಾಕ್ಷಾಧಾರಗಳ ಮೂಲಕ ಅನ್ಯತಾ ಸಾಬೀತುಪಡಿಸಬಹುದಾಗಿರುತ್ತದೆ. ಈ ಕಾರಣದಿಂದ

ಆರೋಪಿಯು ಫಿರ್ಯಾದುದಾರನ ಪಾಟೀಸವಾಲು ಮೂಲಕವಾಗಲೀ ಅಥವಾ ತನ್ನ ಪರವಾಗಿ ವಿಚಾರಣೆ ಮಾಡುವ ಮೂಲಕವಾಗಲೀ ರುಜುವಾತುಪಡಿಸಬೇಕಾಗಿರುತ್ತದೆ.

12. ಈ ಮೇಲ್ಕಂಡ ಪ್ರಕರಣದಲ್ಲಿ ಆರೋಪಿತನು ತನ್ನ ಮೇಲಿನ ಹೊಣೆಗಾರಿಕೆಯನ್ನು ರುಜುವಾತು ಪಡಿಸುವ ಉದ್ದೇಶದಿಂದ ಹಾಗೂ ಫಿರ್ಯಾದುದಾರನ ಪ್ರಕರಣವನ್ನು ಅನ್ಯತಾ ಸಾಬೀತು ಪಡಿಸುವ ಉದ್ದೇಶದಿಂದ ತಾನು ಪಾಟೀಸವಾಲು ಮಾಡುವಾಗ ಮತ್ತು ತನ್ನ ಪ್ರತಿರಕ್ಷಣಾ ಸಾಕ್ಷ್ಯದ ಮೂಲಕ ತನ್ನ ನಿಲುವನ್ನು ತೆಗೆದುಕೊಂಡಿದ್ದು, ತನ್ನ ನಿಲುವಿನಲ್ಲಿ ಆರೋಪಿತನು ತನ್ನ ಮತ್ತು ಫಿರ್ಯಾದುದಾರನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ನಡೆದಿಲ್ಲ, ತಾನು ಮತ್ತು ಫಿರ್ಯಾದುದಾರನು ವ್ಯವಹಾರಿಕವಾಗಿ ಸ್ನೇಹಿತರು, ತನಗೆ ಫಿರ್ಯಾದುದಾರನು ದಿನಾಂಕಃ12.04.2020 ರಂದು ರೂ.2,53,000/- ಗೆ ಈರುಳ್ಳಿಯನ್ನು ಮಾರಾಟ ಮಾಡಿದ್ದು, ಆ ವೇಳೆಯಲ್ಲಿ ಕೊರೋನಾ ಇದ್ದ ಕಾರಣದಿಂದ ಹಣ ಕೊಡಲಾಗಿರುವುದಿಲ್ಲ. ಈ ಕಾರಣದಿಂದ ನಾನು ಫಿರ್ಯಾದುದಾರನಿಗೆ ಹಣವನ್ನು ಪಾವತಿ ಮಾಡುವ ಉದ್ದೇಶದಿಂದ ಆಧಾರವಾಗಿ ನಿಪಿ-1 ರ ಚೆಕ್ ಅನ್ನು ಫಿರ್ಯಾದುದಾರರಿಗೆ ಕೊಟ್ಟಿದ್ದೆ ಮತ್ತು ಫಿರ್ಯಾದುದಾರನು ದಿನಾಂಕಃ ದಿನಾಂಕಃ 21.09.2020 ರಂದು ರೂ.2,00,000/- ರೂಗಳನ್ನು ಆರ್.ಟಿ.ಜಿ.ಎಸ್ ಮೂಲಕ ವರ್ಗಾವಣೆ ಮಾಡಿರುತ್ತಾರೆ. ಬಾಕಿ ರೂ.53,000/- ಗಳನ್ನು ಕೊಡಬೇಕಾಗಿರುತ್ತದೆ. ತಾನು ದಿನಾಂಕಃ 04.04.2022 ರಂದು ಊರಲ್ಲೇ ಇರಲಿಲ್ಲ. ಸೌದಿಗೆ ಹೋಗಿದ್ದೆ. ನೋಟೀಸ್ ಕೊಟ್ಟಾಗಲೂ ತಾನು ಹಜ್ ಯಾತ್ರೆಯಲ್ಲಿದ್ದೆ ಎಂಬುದಾಗಿ ಹೇಳಿ ತಮ್ಮ ನಿಲುವಿಗೆ ಪೂರಕವಾಗಿ

ಫಿರ್ಯಾದುದಾರನು ಸಲ್ಲಿಸಿದ ಫಿರ್ಯಾದನ್ನು ವಜಾ ಮಾಡಬೇಕೆಂದು ಕೋರಿಕೊಂಡಿರುತ್ತಾರೆ.

13. ಈ ಮೇಲ್ಕಂಡ ಪ್ರಕರಣದಲ್ಲಿ ಆರೋಪಿತನ ಪ್ರಥಮ ನಿಲುವುವೇನೆಂದರೆ, ದಿನಾಂಕಃ 04.04.2022 ರಂದು ತಾನು ಊರಿನಲ್ಲೇ ಇರಲಿಲ್ಲ, ತಾನು ಹಜ್ ಯಾತ್ರೆಗೆ ಹೋಗಿದ್ದೆ ಎಂದು ನಿಲುವು ತೆಗೆದುಕೊಂಡಿದ್ದು, ಆದರೆ ಅದಕ್ಕೆ ಪೂರಕವಾಗಿ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಿರುವುದಿಲ್ಲ, ಒಂದು ವೇಳೆ ದಿನಾಂಕಃ 04.04.2022 ರಂದು ಹಜ್ ಗೆ ಹೋಗಿದ್ದೇ ಆಗಿದ್ದಲ್ಲಿ, ಆ ಬಗ್ಗೆ VISA & passport ಅನ್ನು ನ್ಯಾಯಾಲಯದ ಸಮಕ್ಷಮ ಹಾಜರು ಮಾಡಬಹುದಿತ್ತು. ಆದರೆ ಆರೋಪಿತನು ಈ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರು ಮಾಡಲು ಮುಂದಾಗಿರುವುದಿಲ್ಲ. ಈ ಬಗ್ಗೆ ಆರೋಪಿತನು ತನ್ನ ಮುಖ್ಯ ವಿಚಾರಣೆಯಲ್ಲಿ ತನ್ನ ನಿಲುವು ತೆಗೆದುಕೊಂಡ ನಂತರ ಮುಂದುವರೆದ ವಿಚಾರಣೆಗೆ ಹಾಜರಾಗಿರುವುದಿಲ್ಲ. ಹಾಗೂ ಫಿರ್ಯಾದುದಾರನ ಪಾಟೀ ಸವಾಲಿಗೂ ಸಹ ಒಳಪಟ್ಟಿರುವುದಿಲ್ಲ. ಈ ಕಾರಣದಿಂದ ಆರೋಪಿತನ ವಿಚಾರಣೆಯನ್ನು ಪರಿಗಣಿಸುವುದು ಸೂಕ್ತ ಅಲ್ಲ ಎಂಬುದು ಕಂಡುಬರುತ್ತದೆ.

14. ಲಿಖಿತ ವರ್ಗಾವಣೆಯ ಅಧಿನಿಯಮದ ಪ್ರಕರಣದಲ್ಲಿ ಆರೋಪಿತನು ತನ್ನ ಸಾಕ್ಷ್ಯದ ಮೂಲಕವೇ ತನ್ನ ಪ್ರಕರಣವನ್ನು ರುಜುವಾತು ಪಡಿಸಬೇಕು ಎಂಬ ಯಾವುದೇ ನಿಯಮವಿಲ್ಲ. ತನ್ನ ಪ್ರಕರಣವನ್ನು ರುಜುವಾತು ಪಡಿಸುವ ಹೊಣೆಗಾರಿಕೆಯು

ಫಿರ್ಯಾದುದಾರನನ್ನು ಪಾಟೀ ಸವಾಲು ಮಾಡುವಾಗಲೂ ಸಹ ರುಜುವಾತು ಪಡಿಸಬಹುದಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ಆರೋಪಿತನು ತಾನು ದಿನಾಂಕಃ 04.04.2020 ರಂದು ಹಜ್ ಯಾತ್ರೆಗೆ ಹೋಗಿದ್ದೆ, ಊರಲ್ಲಿ ಇರಲಿಲ್ಲ ಎಂಬ ಬಗ್ಗೆ ಯಾವುದೇ ದಾಖಲಾತಿಗಳನ್ನು ಸಾಕ್ಷಿಗೆ ತೋರಿಸಿ ಹಾಜರು ಮಾಡಿರುವುದಿಲ್ಲ. ಕೇವಲ ಪಾಟೀ ಸವಾಲಿನಲ್ಲಿ ನಿರಾಕರಣೆಯ ಉತ್ತರಗಳನ್ನು ಕೇಳುವ ಮೂಲಕ ತಾನು ಊರಲ್ಲಿ ಇರಲಿಲ್ಲ ಎಂಬುದಾಗಿ ಪ್ರಶ್ನೆ ಹಾಕಿರುತ್ತಾರೆಯೇ ಹೊರತು, ಸಂಬಂಧಪಟ್ಟ ದಾಖಲಾತಿಗಳನ್ನು ನ್ಯಾಯಾಲಯದ ಮುಂದೆ ಹಾಜರು ಮಾಡಲು ಯಾವುದೇ ಕ್ರಮ ಕೈಗೊಂಡಿರುವುದಿಲ್ಲ. ಈ ಕಾರಣದಿಂದ ಆರೋಪಿತನ ನಿಲುವಿನ ಮೇಲೆ ಅನುಮಾನ ವ್ಯಕ್ತವಾಗುತ್ತದೆ.

15. ಸಾಮಾನ್ಯವಾಗಿ ಅಪರಾಧಿಕ ಪ್ರಕ್ರಿಯಾ ತತ್ವದಡಿಯಲ್ಲಿ ಯಾವ ವ್ಯಕ್ತಿ ಅಸ್ತಿತ್ವವನ್ನು ಅಲ್ಲಗಳೆಯುತ್ತಾನೋ, ಅಂತಹ ವ್ಯಕ್ತಿಯು ಸಾಬೀತು ಪಡಿಸುವ ಹೊಣೆಗಾರಿಕೆಯಾಗಿರುತ್ತದೆ. ಈ ಪ್ರಕರಣದಲ್ಲೂ ಸಹ ಆರೋಪಿಯ ಮೇಲೆ ಹೊಣೆಗಾರಿಕೆ ಇದ್ದು, ಫಿರ್ಯಾದುದಾರನು ಹಣವನ್ನು ಕೊಟ್ಟೆ ಎಂದು ಹೇಳಿದ ನಂತರ ತಾನು ಊರಲ್ಲಿ ಇಲ್ಲ ಎಂಬುದನ್ನು ನಿಲುವು ತೆಗೆದುಕೊಂಡ ನಂತರ ಅದನ್ನು ಪುನಃ ಅನ್ಯತಾ ಸಾಬೀತು ಪಡಿಸುವ ಹೊಣೆಗಾರಿಕೆ ಆರೋಪಿಯಾಗಿದ್ದಾಗಿರುತ್ತದೆ. ಈ ಹೊಣೆಗಾರಿಕೆಯನ್ನು ಆರೋಪಿಯು ರುಜುವಾತು ಪಡಿಸಲು ಮುಂದಾಗದೇ ಇರುವುದು ಕಂಡುಬರುತ್ತದೆ.

16. ಆರೋಪಿಯ ಮತ್ತೊಂದು ನಿಲುವೇನೆಂದರೆ, ತಾನು ಫಿರ್ಯಾದುದಾರರಿಂದ ಈರುಳ್ಳಿಯನ್ನು ಕೊಂಡು ಕೊಂಡಿದ್ದೆ. ಅದರ ಹಣದ ಬಾಬ್ತುವಿಗಾಗಿ ನಿಪಿ–1 ರ ಚೆಕ್ ಅನ್ನು ಸಹಿ ಮಾಡಿ ಕೊಟ್ಟಿದ್ದೆ, ಅದರ ಬಾಬ್ತು ಹಣವನ್ನು ದಿನಾಂಕಃ 21.09.2020 ರಂದು RTGS ಮೂಲಕ ರೂ.2,00,000,/– ಗಳನ್ನು ಕೊಟ್ಟಿದ್ದೇನೆ, ಉಳಿಕೆ ಹಣ ರೂ.53,000/– ಗಳ ಬಾಕಿ ಕೊಡಬೇಕು ಎಂದು ನಿಲುವು ತೆಗೆದುಕೊಳ್ಳುತ್ತಾರೆ. ಈ ನಿಲುವಿಗೆ ಪೂರಕವಾಗಿ ಫ್ರಾಸಾ–1 ರವರನ್ನು ಆರೋಪಿ ಪರ ವಕೀಲರು ದಿನಾಂಕಃ 24.05.2023 ರ ಪಾಟೀ ಸವಾಲಿನಲ್ಲಿ ಪ್ರಶ್ನೆ ಹಾಕಿದ್ದು, ಈ ಪ್ರಶ್ನೆಯಲ್ಲಿ ದಿನಾಂಕಃ 07.12.2018 ರ ವ್ಯವಹಾರದಲ್ಲಿ ಒಟ್ಟು 28 ಬ್ಯಾಗ್ ಈರುಳ್ಳಿಗಳ ಪ್ರತಿಫಲವಾಗಿ ರೂ.50,350/– ಹಣವನ್ನು NEFT ಮೂಲಕ ಪಡೆದುಕೊಂಡ ಬಗ್ಗೆ, ಅದೇ ರೀತಿ ದಿನಾಂಕಃ 13.03.2019 ರಂದು ರೂ.1,15,000/– ಗಳನ್ನು ಖಾತೆ ಮೂಲಕ ಪಡೆದುಕೊಂಡ ಬಗ್ಗೆ ಹಾಗೂ ದಿನಾಂಕಃ 23.11.2018 ರಂದು ರೂ.50,000/– ಗಳನ್ನು NEFT ಮೂಲಕ ಪಡೆದುಕೊಂಡ ಬಗ್ಗೆ ಒಪ್ಪುತ್ತಾರೆ. ಮುಂದುವರೆದು ಫಿರ್ಯಾದುದಾರರು ಅದೇ ವ್ಯವಹಾರವೇ ಬೇರೆ, ಇದೇ ವ್ಯವಹಾರವೇ ಬೇರೆ ಎಂದು ನುಡಿಯುತ್ತಾರೆ. ಆದರೆ ಈ ಹೇಳಿಕೆಗೆ ವಿರುದ್ಧವಾಗಿ ಆರೋಪಿಯ ಮುಖ್ಯ ವಿಚಾರಣೆಯನ್ನು ಗಮನಿಸಿದಾಗ ದಿನಾಂಕಃ 12.04.2020 ರಂದು ತಾನು ಈರುಳ್ಳಿಯನ್ನು ಕೊಂಡುಕೊಂಡ ಬಗ್ಗೆ ಆರೋಪಿ ಒಪ್ಪುತ್ತಾರೆ ಮತ್ತು ಈ ಹಣವನ್ನು ದಿನಾಂಕಃ 21.09.2020 ರಂದು ಕೊಟ್ಟಿರುವ ಬಗ್ಗೆ ಒಪ್ಪುತ್ತಾರೆ. ಈ ಎರಡು ವ್ಯವಹಾರಗಳನ್ನು ಸೂಕ್ಷ್ಮವಾಗಿ ಗಮನಿಸಿ ನೋಡಿದಾಗ ಫಿರ್ಯಾದುದಾರರ ಮತ್ತು

ಆರೋಪಿಯ ನಡುವೆ ಹಿಂದಿನಿಂದಲೂ ವ್ಯವಹಾರ ಕಂಡುಬರುತ್ತದೆ. ಆರೋಪಿತನ ಪಾಟೀ ಸವಾಲನ್ನು ಗಮನಿಸಿದಾಗ ಆರೋಪಿತನು ತಾನು 2018 ರಲ್ಲಿ ಈರುಳ್ಳಿ ವ್ಯವಹಾರ ಮಾಡಿದ ಬಗ್ಗೆ ಮತ್ತು 2018 ರಲ್ಲೇ ಹಣ ಪಾವತಿ ಮಾಡಿದ ಬಗ್ಗೆ ಪ್ರಶ್ನೆ ಹಾಕುತ್ತಾರೆಯೇ ಹೊರತು 2020 ರಲ್ಲಿ ವ್ಯವಹಾರ ಆಗಿದೆ ಎನ್ನಲಾದ ವ್ಯವಹಾರದ ಬಗ್ಗೆ ಯಾವುದೇ ಸಕರಾತ್ಮಕ ಉತ್ತರವನ್ನು ಪಡೆದುಕೊಂಡಿರುವುದಿಲ್ಲ. ಈ ಕಾರಣದಿಂದ 2018 ರ ವ್ಯವಹಾರಕ್ಕೆ 2018 ರಲ್ಲೇ ಹಣ ಕೊಟ್ಟಿರುತ್ತಾರೆ, 2020 ರಲ್ಲಿ ಆಗಿದೆ ಎನ್ನಲಾದ ಈರುಳ್ಳಿ ವ್ಯವಹಾರದ ದಾಖಲಾತಿಗಳನ್ನಾಗಲೀ ಅಥವಾ ಹಣವನ್ನು ಪಾವತಿ ಮಾಡಿದ ಬಗ್ಗೆ ಯಾವುದೇ ದಾಖಲಾತಿಗಳನ್ನು ಹಾಜರು ಮಾಡಿರುವುದಿಲ್ಲ. ಈ ಕಾರಣದಿಂದ 2020 ಈರುಳ್ಳಿ ವ್ಯವಹಾರದ ಖಾತ್ರಿಗಾಗಿ ನಿಪಿ-1 ರ ಚೆಕ್ ಅನ್ನು ಫಿರ್ಯಾದುದಾರರಿಗೆ ಕೊಟ್ಟೆ ಎಂಬ ಆರೋಪಿ ಹೇಳಿಕೆ ಬಗ್ಗೆ ಅನುಮಾನ ವ್ಯಕ್ತವಾಗುತ್ತದೆ.

17. ಒಂದು ವೇಳೆ ಆರೋಪಿಯು 2020 ರಲ್ಲಿಯೇ ಈರುಳ್ಳಿ ವ್ಯವಹಾರದ ಖಾತ್ರಿಗಾಗಿ ನಿಪಿ-1 ರ ಚೆಕ್ ಅನ್ನು ಫಿರ್ಯಾದುದಾರರಿಗೆ ಕೊಟ್ಟಿದ್ದೇ ಆಗಿದ್ದಲ್ಲಿ ಮತ್ತು ತಾನು ಹಣವನ್ನು ಮರುಪಾವತಿ ಮಾಡಿದ ನಂತರ ಆ ನಿಪಿ-1 ಚೆಕ್ ಅನ್ನು ಹಿಂಪಡೆಯಲು ಏಕೆ ಸಾಧ್ಯವಾಗಲಿಲ್ಲ ಎಂಬ ಬಗ್ಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ. ಜೊತೆಯಲ್ಲಿ ನಿಪಿ-1 ರ ಚೆಕ್ ಅನ್ನು ಫಿರ್ಯಾದುದಾರರು ಕೊಡದೇ ಇದ್ದಾಗ ಒಬ್ಬ ಸಾಮಾನ್ಯ ವ್ಯಕ್ತಿಯಾಗಿ ಏನೆಲ್ಲಾ ಕ್ರಮ ಕೈಗೊಂಡಿದ್ದಾನೆ ಎಂಬ ಬಗ್ಗೆ ಯಾವುದೇ ದಾಖಲಾತಿಗಳನ್ನು ನ್ಯಾಯಾಲಯ ಸಮಕ್ಷಮ ಹಾಜರು ಮಾಡಿರುವುದಿಲ್ಲ. ಫಿರ್ಯಾದುದಾರರ

ಫಿರ್ಯಾದಿನಲ್ಲಿ ಹೇಳಿದಂತೆ ಈ ಹಣ ಈರುಳ್ಳಿ ವ್ಯವಹಾರವಲ್ಲ, ಬದಲಾಗಿ ಆರೋಪಿಯು ತನ್ನ ಬಳಿ ದಿನಾಂಕಃ 04.04.2022 ರಂದು ತಾನು ದರದು ನಿಮಿತ್ತ ಸಾಲವಾಗಿ ಪಡೆದುಕೊಂಡಿದ್ದು ಎಂದು ಹೇಳಿದ್ದು, ಈ ವಿಚಾರವನ್ನು ಆರೋಪಿತನು ಮಾಡಿದ ಪಾಟೀ ಸವಾಲು ಹಾಗೂ ಮುಖ್ಯ ವಿಚಾರಣೆಯಲ್ಲಿ ಗಮನಿಸಿದಾಗ ಆರೋಪಿಯು ವ್ಯವಹಾರಕ್ಕೆ ಕೊಟ್ಟಿದ್ದೇ ಎನ್ನಲಾದ ಸಮಯಕ್ಕೂ ಮತ್ತು ಹಣ ಪಡೆದುಕೊಂಡ ಎಂದು ಹೇಳಲಾದ ಸಮಯಕ್ಕೂ ಸುಮಾರು 2 ವರ್ಷಗಳ ಅಂತರವಿರುತ್ತದೆ. ಈ ಅಂತರದಲ್ಲಿ ಯಾವುದೇ ಕ್ರಮವನ್ನು ಜರುಗಿಸದೇ ಇದ್ದುದ್ದನ್ನು ಗಮನಿಸಿದಾಗ ಆರೋಪಿತನು ಈ ಪ್ರಕರಣದ ಸಾಲವನ್ನು ಫಿರ್ಯಾದುದಾರರಿಂದ ಪಡೆದುಕೊಂಡು ಅದರ ಮರುಪಾವತಿಗಾಗಿ ನಿಪಿ–1 ರ ಚೆಕ್ ಅನ್ನು ಫಿರ್ಯಾದುದಾರರಿಗೆ ಕೊಟ್ಟ ಕಾರಣದಿಂದ ಆರೋಪಿತನು ಫಿರ್ಯಾದುದಾರರ ವಿರುದ್ಧ ಕ್ರಮ ವಹಿಸಲು ಮುಂದಾಗಿಲ್ಲ ಎಂದು ಕಂಡು ಬರುತ್ತದೆ, ಈ ಕಾರಣದಿಂದ ಆರೋಪಿತನ ನಿಲುವಿನ ಬಗ್ಗೆ ಅನುಮಾನ ಉಂಟಾಗುತ್ತದೆ.

18. ಮುಂದುವರೆದು ಆರೋಪಿತನ ಪ್ರಕರಣವನ್ನು ಸಂಪೂರ್ಣವಾಗಿ ಗಮನಿಸಿದಾಗ ಆರೋಪಿತನು ನಿಪಿ–1 ಚೆಕ್ ತನ್ನದೇ, ಅದರ ಸಹಿ ತನ್ನದೇ ಎಂದು ತನ್ನ ಕಲಂ 313 ಹೇಳಿಕೆಯಲ್ಲಿ ಒಪ್ಪಿಕೊಂಡು ತನ್ನ ಮುಖ್ಯ ವಿಚಾರಣೆಯಲ್ಲೂ ಸಹ ಅದೇ ವಿಚಾರವನ್ನು ಹೇಳಿರುತ್ತಾರೆ. ಆದರೆ ನ್ಯಾಯಾಲಯದ ಮುಂದೆ ದಿನಾಂಕಃ 20.06.2023 ರಂದು ತಾನು ಅರ್ಜಿ ಸಲ್ಲಿಸಿ ನಿಪಿ–1 ರ ಸಹಿಯ ಶಾಹಿಯ ವಯಸ್ಸನ್ನು ಪರಿಶೀಲಿಸಲು ಕೋರಿರುತ್ತಾರೆ. ಆದರೆ ಈ ನ್ಯಾಯಾಲಯವು ಆರೋಪಿತನು ನಿಪಿ–1 ರ ಸಹಿ ತನ್ನದೇ

ಮತ್ತು ತಾನೇ ಇದನ್ನು ಫಿರ್ಯಾದುದಾರರಿಗೆ ಕೊಟ್ಟಿದ್ದು ಎಂದು ಒಪ್ಪಿಕೊಂಡ ಕಾರಣದಿಂದ ಶಾಯಿಯ ವಯಸ್ಸು ಪರಿಶೀಲಿಸುವ ಅವಶ್ಯಕತೆಯಿಲ್ಲ ಎಂದು ದಿನಾಂಕಃ 19.07.2023 ರಂದು ಆರೋಪಿ ಸಲ್ಲಿಸಿದ ಅರ್ಜಿಯನ್ನು ವಜಾ ಮಾಡಲಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಆರೋಪಿಯು ತನಗೆ ಸೇರಿದ ಖಾತೆಯನ್ನು ಮುಚ್ಚಿದ ನಂತರ ನಿಪಿ-1 ರಲ್ಲಿನ ಹಣದ ಮರುಪಾವತಿಗಾಗಿ ನಿಪಿ-1 ಚೆಕ್ ಅನ್ನು ಫಿರ್ಯಾದುದಾರಿಗೆ ಕೊಟ್ಟು ಮೋಸ ಮಾಡಿರುವುದು ಕಂಡು ಬರುತ್ತದೆ.

19. ಆರೋಪಿಯ ಮತ್ತೊಂದು ನಿಲುವೇನೆಂದರೆ ನಿಪಿ.1 ರ ಮೇಲಿನ ಸಹಿ ತನ್ನದೇ ಆದರೆ ಬರವಣಿಗೆ ತನ್ನದ್ದಲ್ಲ ಎಂಬ ನಿಲುವನ್ನು ತೆಗೆದುಕೊಂಡಿರುತ್ತಾನೆ. ಈ ವಿಚಾರವಾಗಿ **ಮಾನ್ಯ ಕರ್ನಾಟಕ ಉಚ್ಛ ನ್ಯಾಯಾಲಯವು Ganesh Vs**. **Doddegowda (Criminal Appeal No**.2778/2009), **wherein it is held as follows**:

> **"There is no legal prohibition in the cheque being found in two different inks, as it is not unusal to find in business practice that the particulars in a cheque is filled up by one person and the signatory**

may be another. **Therefore, the same would not be a circumstance which can be held against the complainant**.

20. ಅದೇ ರೀತಿ ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯದ 2001(3) **Civil Court cases** 155(**Karnataka**) between **S.R Murulidhara V/s Ashok G Y, it is hereunder**:

> "**Negotiable Instruments Act**, 1881, **S**.138–**Blank chque–Duly signed by maker thereof authorising payee to fill up amount agreed upon–Does not invalidate cheque as such practice is recognised and permitted by law–Dishonour of such cheque attracts penal liability**".

ಈ ಮೇಲ್ಕಂಡ ಪ್ರಕರಣವನ್ನು ಗಮನಿಸಿದಾಗ ಆರೋಪಿಯು ತನಾಗಲೀ, ತನ್ನ ನಿರ್ದೇಶಿಸಿದ ವ್ಯಕ್ತಿಯಿಂದಾಗಲೀ ಬರವಣಿಗೆ ಮಾಡಿಸುವ ಅವಕಾಶವಿದ್ದು, ಈ ಪ್ರಕರಣದಲ್ಲಿಯೂ ಸಹ ಮೇಲ್ಕಂಡ ಪ್ರಕರಣ ಅನ್ವಯಿಸುತ್ತದೆ.

21. ಅದೇ ರೀತಿ ಭಾರತದ ಮಾನ್ಯ ಸರ್ವೋಚ್ಛ ನ್ಯಾಯಾಲಯವು 2021(5) **SCC** 283 **Kalamani Tex and another V/s Balasubramanyam**.**P** ರ ಪ್ರಕರಣದಲ್ಲಿ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ .

> "**U**.**sec**. 118 **and** 113: **once issuance of cheque and signature admitted, it is required to presume that the cheque was issues as consideration for a legal enforceable debt**."

22. ಈ ಮೇಲ್ಕಂಡ ತೀರ್ಪಿನ ನಿರ್ದೇಶನಗಳು ಈ ಪ್ರಕರಣಕ್ಕೂ ಸಹ ಅನ್ವಯವಾಗುತ್ತದೆ. ಈ ಪ್ರಕರಣದಲ್ಲೂ ಸಹ ನಿಪಿ.1 ರ ಚೆಕ್ ಆರೋಪಿಗೆ ಸೇರಿದ್ದು, ಸಹಿ ಆರೋಪಿಯದ್ದೇ ಮತ್ತು ತಾನೇ ನಿಪಿ.1 ರ ಚೆಕ್ ನ್ನು ಫಿರ್ಯಾದುದಾರನಿಗೆ ಕೊಟ್ಟಿದ್ದು ಎಂದು ತೀರ್ಮಾನಿಸಿದ ಕಾರಣ ನಿಪಿ.1 ರ ಚೆಕ್ ಅನ್ನು ಕಾನೂನು ಬದ್ಧ ಸಾಲದ ಪ್ರತಿಫಲವಾಗಿ ನೀಡಿದ್ದಾರೆ ಎಂಬುದು ಈ ನ್ಯಾಯಾಲಯದ ಅಭಿಪ್ರಾಯವಾಗಿದೆ.

23. ಅದೇ ರೀತಿ ಭಾರತದ ಮಾನ್ಯ ಸರ್ವೋಚ್ಛ ನ್ಯಾಯಾಲಯವು 2022 **SCC online SC** 1131 **P**. **Rasiya V/s Abdul Nazir and another** ಪ್ರಕರಣದಲ್ಲಿ ಈ ಕೆಳಕಂಡಂತೆ ಆದೇಶ ನೀಡಿರುತ್ತದೆ .

"Once the initial burden is discharged by the complainant that the cheque was issued by the accused and the signature and the issuance of the cheque is not disputed by the accused, in that case, the onus will shift upon the accused to prove the contrary that the cheque was not for any debt or other liability. The presumption u/s 138 of NI Act is a statutory presumption and thereafter, once it is presumed that the cheque is issued in whole or in part of any debt or other liability which is in favour of the complainant or holder of the cheque, in that case, it is for the accused to prove the contrary.''

ಈ ಮೇಲಿನ ಪ್ರಕರಣವನ್ನು ಈ ಪ್ರಕರಣಕ್ಕೆ ಅನ್ವಯಿಸಿದಾಗ ಈ ಪ್ರಕರಣದಲ್ಲಿಯೂ ಸಹಾ ಆರೋಪಿತನು ತನ್ನ ಮೇಲಿನ ಹೊಣೆಗಾರಿಕೆಯನ್ನು ರುಜುವಾತು ಪಡಿಸದೇ ವಿಫಲನಾಗಿರುವುದು ಕಂಡುಬರುತ್ತದೆ.

24. ಅದೇ ರೀತಿ **Criminal Appeal No**.636/2019 **In Basavalingappa V/s Mudibasappa** ರ **ಪ್ರಕರಣದಲ್ಲಿ** ಮಾನ್ಯ ಸರ್ವೋಚ್ಚ ನ್ಯಾಯಾಲಯವು ಈ ಹಿಂದೆ ನೀಡಿದ **AIR** 2010(**SC**)1898 **Rangappa Vs**. **Mohan** ಪ್ರಕರಣದಲ್ಲಿ ನೀಡಿದಂತೆ ಈ ಪ್ರಕರಣದಲ್ಲೂ ಸಹ ಆರೋಪಿತನು ಖಂಡಿಸಿದ ನಂತರ ರುಜುವಾತುಪಡಿಸುವ ಹೊಣೆಗಾರಿಕೆಯನ್ನು ಆರೋಪಿತನ ಮೇಲೆ ಹೇರಿದ್ದು, ಸದರಿ ಪ್ರಕರಣವನ್ನು ಗಮನಿಸಿದಾಗ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ಈ ಕೆಳಕಂಡಂತೆ ಕೆಲವು ಅಂಶಗಳನ್ನು ರುಜುವಾತುಪಡಿಸುವ ಬಗ್ಗೆ ತಿಳಿಸಿರುತ್ತದೆ.

> **As per the Criminal Appeal No**.636/2019 **Hon'ble Apex court has held that there is initial presumption about the existing of the consideration U/s**.118(**a**) **and the burden is on the accused and Hon'ble court summarise the principles in following manner**:
>
> (**i**) **Once the execution of cheque is admitted Section** 139 **of the Act mandates a presumption that the cheque was for the discharge of any debt or other liability**.

(ii) The presumption under Section 139 is a rebuttable presumption and the onus is on the accused to raise the probable defence. The standard of proof for rebutting the presumption is that of preponderance of probabilities.

(iii) To rebut the presumption, it is open for the accused to rely on evidence led by him or accused can also rely on the materials submitted by the complainant in order to raise a probable defense. Inference of preponderance of probabilities can be drawn not only from the materials brought on record by the parties but also by reference to the circumstances upon which they rely.

(iv) That it is not necessary for the accused to come in the witness box in

support of his defence, Section 139 **imposed an evidentiary burden and not a persuasive burden**.

(**v**) **It is not necessary for the accused to come in the witness box to support his defence**.

25. ಈ ಮೇಲ್ಕಂಡ (**ii**)(**iii**) **ನೇ ಖಂಡಿಕೆಯನ್ನು ಗಮನಿಸಿದಾಗ** ಆರೋಪಿತನು (**The standard of proof for rebutting the presumption is necessary**) ದಾಖಲಾತಿಗಳ ಸಹಿತ ಖಂಡಿಸಿಬೇಕಾದದ್ದು ಮುಖ್ಯವಾಗಿರುತ್ತದೆ. ಆದರೆ ಈ ಪ್ರಕರಣದಲ್ಲಿ ನಿಪಿ-1 ರ ಚೆಕ್ ಆರೋಪಿತನಿಗೆ ಸೇರಿದ್ದು, ಅದರಲ್ಲಿರುವ ಸಹಿ ಆರೋಪಿತನ್ನದ್ದೇ ಎಂದು ರುಜುವಾತು ಆದ ನಂತರ ಫಿರ್ಯಾದುದಾರನು ಮತ್ತು ತನ್ನ ನಡುವೆ ಯಾವುದೇ ಹಣಕಾಸಿನ ವ್ಯವಹಾರ ಇಲ್ಲ ಎಂದು ಖಂಡಿಸಿದ್ದು, ಆದರೆ ತನ್ನ ನಿಲುವನ್ನು ಖಂಡಿಕೆ (**ii**)(**iii**) **ರಂತೆ** ಸಾಬೀತುಪಡಿಸುವುದಿಲ್ಲ.

26. ಫಿರ್ಯಾದುದಾರನು ಈ ಮೇಲ್ಕಂಡ ಪ್ರಕರಣದಲ್ಲಿ **ಲಿಖಿತಗಳ ವರ್ಗಾವಣೆಯ ಅಧಿನಿಯಮದ ಕಲಂ 138 ರಂತೆ** ಅಪರಾಧಿಕ ತತ್ವದ ಹೊಣೆಗಾರಿಕೆಯನ್ನು ಈ ಕೆಳಕಂಡ ಘಟಕಾಂಶದಂತೆ ರುಜುವಾತುಪಡಿಸಬೇಕಾಗುತ್ತದೆ. ಅದರಂತೆ

1. **That a cheque was issued**.

2. **The same was presented**

3. **But**, **it was dishonoured**.

4. **A notice in terms of the said provisions was served on the person sought to be made liable and**

5. **Dispite of service of notice**, **neither any payment was made nor other other obligations**, **if any were complied with within** 15 **days from the date of receipt of notice**.

ಈ ಪ್ರಕರಣದಲ್ಲೂ ಸಹ ಪಿರ್ಯಾದುದಾರನು ಮೇಲ್ಕಂಡ ತಿಳಿಸಿರುವ ಎಲ್ಲಾ ಘಟಕಾಂಶಗಳನ್ನು ರುಜುವಾತು ಪಡಿಸಿರುತ್ತಾನೆ.

27. ಜೊತೆಗೆ **A negotiable instrument including a cheque carries presumption of consideration in terms of Section** 118(**a**) **and under Section** 139 **of the Act**. **Sections** 118(**a**) **and** 139 **read as under**:

"118. **Presumptions as to negotiable instruments**.– **Until the contrary is proved**, **the following presumptions shall be made**:–

(a)of consideration —that every negotiable instrument was made or drawn for consideration, **and that every such instrument**, **when it has been accepted**, **endorsed**,**negotiated or transferred was accepted**, **endorsed**, **negotiated or transferred for consideration** ;.

sec 139. **Presumption in favour of holder**. **—It shall be presumed**, **unless the contrary is proved**, **that the holder of a cheque received the cheque of the nature referred to in section** 138 **for the discharge**, **in whole or in part**, **of any debt or other liability**."

28. ಈ ಪ್ರಕರಣದಲ್ಲಿ ಆರೋಪಿಯು ಕಲಂ 139 ರಂತೆ ಖಂಡಿಸದ ಕಾರಣ ಕಲಂ 139 ರ ಪ್ರಯೋಜನವನ್ನು ಫಿರ್ಯಾದಾರನು ಪಡೆದುಕೊಳ್ಳುತ್ತಾನೆ. ಈ ಮೇಲ್ಕಂಡ ಪ್ರಕರಣದಲ್ಲಿ ಆರೋಪಿತನು ಫ್ರಾಸಾ-1 ರವರ ಪಾಟೀ ಸವಾಲಿನ ನಂತರ ಮುಖ್ಯ ವಿಚಾರಣೆ ಮಾಡಲು ಹಲವಾರು ಅವಕಾಶ ಕೋರಿರುತ್ತಾರೆ. ನಂತರ ದಿನಾಂಕಃ 10.10.2023 ರಂದು ತನ್ನ ಪಾಟೀ ಸವಾಲು ಮಾಡಿದ ನಂತರ ಆರೋಪಿ ಮತ್ತು ಅವನ ವಕೀಲರು ಉದ್ದೇಶ ಪೂರ್ವಕವಾಗಿಯೇ ಗೈರು ಹಾಜರಾಗಿರುವುದು ಕಂಡುಬರುತ್ತದೆ, ನಂತರ ಪ್ರಕರಣದಲ್ಲಿ ವಾದ ಮಂಡನೆ ಆದ ನಂತರ ಪ್ರಕರಣ ತೀರ್ಪಿಗಾಗಿ ಆರೋಪಿಯು ಪುನಃ ಬಂದು ತನ್ನ ವಿಚಾರಣೆಯನ್ನು ಮುಂದುವರೆಸುವ ಅವಕಾಶವಿದೆ ಎಂದು ಹಲವಾರು ಕಾಲವಾಕಾಶಗಳನ್ನು ನ್ಯಾಯಾಲಯವು ನೀಡುವ ಉದ್ದೇಶದಿಂದ ನ್ಯಾಯಾಲಯವು ತೀರ್ಪಿಗಾಗಿ ಹಲವು ಅವಕಾಶ ನೀಡಿರುತ್ತದೆ. ಆದರೆ ಆರೋಪಿ ಮತ್ತು ಆರೋಪಿ ಪರ ವಕೀಲರು ನ್ಯಾಯಾಲಯದಲ್ಲಿ, ಅದರಲ್ಲಿಯೂ ಈ ಪ್ರಕರಣದಲ್ಲಿ ಹಾಜರಾಗದೇ ಇರುವುದು ಕಂಡುಬರುತ್ತದೆ. ಈ ಉದ್ದೇಶವನ್ನು ಗಮನಿಸಿದಾಗ ಉದ್ದೇಶಪೂರ್ವಕವಾಗಿಯೇ ಹಾಜರಾಗದೇ ಇರುವುದು ಕಂಡುಬರುತ್ತದೆ.

29. ಈ ಮೇಲ್ಕಂಡ ಎಲ್ಲಾ ವಸ್ತು ಸಂಗತಿಗಳನ್ನು ಮತ್ತು ನಿಪಿ-1 ರಿಂದ 11 ಅನ್ನು ಗಮನಿಸಿದಾಗ ಫಿರ್ಯಾದುದಾರನು ಆರೋಪಿಗೆ ರೂ.6,00,000/- ಕೊಟ್ಟಿದ್ದು, ಈ ಹಣದ ಮರು ಪಾವತಿಗಾಗಿ ಆರೋಪಿಯು ತನ್ನ ಖಾತೆಗೆ ಸೇರಿದ ನಿಪಿ.1 ರ ಚೆಕ್

ಅನ್ನು ಫಿರ್ಯಾದುದಾರನಿಗೆ ನೀಡಿರುತ್ತಾನೆ ಎಂಬುದನ್ನು ಮತ್ತು ಸದರಿ ಚೆಕ್ ಅನ್ನು ಬ್ಯಾಂಕ್‌ಗೆ ಹಾಜರು ಮಾಡಿದಾಗ, ಆರೋಪಿಯ "**ಖಾತೆಯನ್ನು ಮುಚ್ಚಿರುತ್ತಾನೆ** " ಎಂದು ಬಂದ ಹಿಂಬರಹವನ್ನು ನಿಪಿ-2 ಎಂದು, ನೋಟೀಸಿಗಳ ಕಛೇರಿ ಪ್ರತಿಯನ್ನು ನಿಪಿ 3 ಎಂದು, ಒಂದು ಅಂಚೆ ಲಕೋಟೆಯನ್ನು ನಿಪಿ 4 ಎಂದು ಮತ್ತು ನಿಪಿ- 3 ರ ತಿಳುವಳಿಕೆ ಪತ್ರವೂ ನಿಪಿ-4 ರಂತೆ ಜಾರಿಗೆ ಹೋದಾಗ ಆರೋಪಿಯು ಅದನ್ನು ಖುದ್ದು ಪಡೆದುಕೊಳ್ಳದೇ ಇರುವ ಕಾರಣ ಖುದ್ದು ಜಾರಿಯಾಗಿರುತ್ತದೆ ಎಂಬುದು ನ್ಯಾಯಾಲಯದ ಅಭಿಪ್ರಾಯವಾಗಿರುತ್ತದೆ. ನಂತರ ಆರೋಪಿಯು ಹಣವನ್ನು ಮರುಪಾವತಿ ಮಾಡಿಲ್ಲ ಎಂಬ ವಸ್ತು ಸ್ಥಿತಿಗಳನ್ನು ಫಿರ್ಯಾದುದಾರನು ಸಾಕ್ಷ್ಯಧಾರಗಳ ಸಹಿತ ಮತ್ತು **ಲಿಖಿತ ವರ್ಗಾವಣೆ ಅಧಿನಿಯಮ ಕಲಂ 138** ರ ಅನ್ವಯದ ಎಲ್ಲಾ ಘಟಕಾಂಶಗಳನ್ನು ರುಜುವಾತುಪಡಿಸಿರುತ್ತಾರೆ ಮತ್ತು ಆರೋಪಿತನು ಈ ಎಲ್ಲಾ ಅಂಶಗಳನ್ನು ಅನ್ಯಥಾ ಸಾಬೀತುಪಡಿಸದ ಹಾಗೂ ಸಾಕಷ್ಟು ಪರಿಪೂರ್ಣ ಸಾಕ್ಷಿಗಳ ಮೂಲಕ ಖಂಡಿಸದೇ ಇರುವ ಕಾರಣ (Rebuttal) **ಲಿಖಿತ ವರ್ಗಾವಣೆಯ ಅಧಿನಿಯಮ ಕಲಂ 139** ರಂತೆ ಚೆಕ್ ನ ಧಾರಕನು ಅಂದರೆ ಆರೋಪಿಯು ತನ್ನ ಕಾನೂನುಬದ್ಧ ಸಾಲದ ಹಣವನ್ನು ಹಿಂತಿರುಗಿಸುವ ಸಲುವಾಗಿ ಚೆಕ್ ಅನ್ನು ನೀಡಿದ್ದಾನೆ ಎಂಬುದು ಸ್ಪಷ್ಟವಾಗಿ ತಿಳಿದುಬರುತ್ತದೆ ಮತ್ತು ಆರೋಪಿಯು ತನ್ನ ಮೇಲಿನ ಹೊಣೆಯನ್ನು ರುಜುವಾತುಪಡಿಸಲು ವಿಫಲನಾಗಿರುತ್ತಾನೆ. ಈ ಕಾರಣದಿಂದ ಮಾನ್ಯ ಸರ್ವೋಚ್ಚ ನ್ಯಾಯಾಲಯವು ನೀಡಿರುವ **AIR** 2010(**SC**) 1898 **Rangappa Vs**. **Mohan** ಪ್ರಕರಣದಲ್ಲಿ ನೀಡಿದಂತೆ ಆರೋಪಿಯು ತನ್ನ

ಮೇಲಿನ ಹೊಣೆಯನ್ನು ಅನ್ಯಥಾ ಸಾಬೀತುಪಡಿಸದೇ ಇರುವ ಕಾರಣದಿಂದ ಚೆಕ್ ಧಾರಕನು ಸದರಿ ಚೆಕ್‌ನ್ನು ಮತ್ತು ಸಾಲ ಮತ್ತು ಇನ್ನಿತರ ಹೊಣೆಗಾರಿಕೆಯ ಸಂಪೂರ್ಣ ಅಥವಾ ಭಾಗಶಃ ತೀರುವಳಿಗೆ ಹಣವನ್ನು ಪಡೆದಿದ್ದಾನೆ ಎಂಬುದು ರುಜುವಾತುವಾಗಿರುತ್ತದೆ. ಈ ಕಾರಣದಿಂದ ಅಂಶ–1 ಕ್ಕೆ **ಸಕಾರಾತ್ಮಕವಾಗಿ** ಉತ್ತರಿಸುತ್ತೇನೆ.

30. **ಅಂಶ–2**: ಈ ಮೇಲ್ಕಂಡ ಅಂಶ–1 ರ ಕಾರಣಗಳಿಗಾಗಿ ಈ ಕೆಳಕಂಡಂತೆ ಆದೇಶಿಸಿರುತ್ತೇನೆ.

:**ಆದೇಶ**:

ದಂಡ ಪ್ರಕ್ರಿಯಾ ಸಂಹಿತೆ ಕಲಂ ರ 255(2) ಅಡಿಯ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿಯು **ಲಿಖಿತ ವರ್ಗಾವಣೆಯ ಅಧಿನಿಯಮ ಕಲಂ 138** ರಡಿಯಲ್ಲಿ ದಂಡನೀಯವಾದ ಅಪರಾಧವನ್ನು ಮಾಡಿರುತ್ತಾನೆ ಎಂದು ನಿರ್ಣಯಿಸಿರುತ್ತೇನೆ.

ಆರೋಪಿಗೆ **ಲಿಖಿತ ವರ್ಗಾವಣೆ ಅಧಿನಿಯಮ ಕಲಂ 138** ರೀತ್ಯಾ ಹಣ ರೂ.6,10,000/- ದಂಡವನ್ನು ವಿಧಿಸಲಾಗಿದೆ. ಈ ಹಣದಲ್ಲಿ ಆರೋಪಿಯು ರೂ.6,10,000/- ರೂಗಳ ದಂಡದ ಹಣವನ್ನು ಕೊಡಲು

ತಪ್ಪಿದ್ದಲ್ಲಿ ಆರೋಪಿಯು 1 ವರ್ಷ ಸಾಧಾ ಕಾರಾಗೃಹವನ್ನು ಅನುಭವಿಸತಕ್ಕದ್ದು.

ದಂಡಪ್ರಕ್ರಿಯಾ ಸಂಹಿತೆ ಕಲಂ 357(1)ರ ಅಡಿಯಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸುತ್ತಾ ಆರೋಪಿಯು ಸಂದಾಯ ಮಾಡಿದ ದಂಡದ ಹಣ ರೂ.6,10,000/- ಗಳಲ್ಲಿ ರೂ.6,00,000/-ಗಳನ್ನು ಫಿರ್ಯಾದುದಾರರಿಗೆ ಪರಿಹಾರವಾಗಿ ಪಡೆಯಲು ಅರ್ಹರಾಗಿರುತ್ತಾರೆ. ಉಳಿಕೆ ರೂ.10,000/- ಗಳು ಸರ್ಕಾರಕ್ಕೆ ಜಮೆಯಾಗತಕ್ಕದ್ದು.

ಆರೋಪಿಯ ಮತ್ತು ಜಾಮೀನುದಾರನ ಮುಚ್ಚಳಿಕೆ ಪತ್ರವನ್ನು ಈ ಮೂಲಕ ರದ್ದುಪಡಿಸಲಾಗಿದೆ.

ಆರೋಪಿತನಿಗೆ ಉಚಿತ ತೀರ್ಪಿನ ಪ್ರತಿಯನ್ನು ಕಛೇರಿ ಮೂಲಕ ನೀಡಲು ಸೂಚಿಸಲಾಗಿದೆ.

[ತೀರ್ಪನ್ನು ನೇರವಾಗಿ ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮೇಲೆ ಉಕ್ತಲೇಖನ ನೀಡಿ ಬೆರಳಚ್ಚನ್ನು ಪಡಿಸಿದ ನಂತರ ತಪ್ಪುಗಳನ್ನು ತಿದ್ದಿ ತೆರೆದ ನ್ಯಾಯಾಲಯದಲ್ಲಿ ದಿನಾಂಕ 21 **ನೇ ನವೆಂಬರ್** 2023 ರಂದು ಘೋಷಿಸಲಾಯಿತು]

(ಶಿವಕುಮಾರ ಜಿ.ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.

ಅ ನು ಬಂ ಧ

1. ಅಭಿಯೋಜನೆಯವರು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ

ಫ್ರಾಸಾ–1	:	ಶ್ರೀ ರಾಜಪ್ಪ ಕೆ.ಪಿ

2. ಅಭಿಯೋಜನೆಯವರು ನಿಶಾನೆಯಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ:–

ನಿಪಿ–1	:	ಚೆಕ್
ನಿಪಿ–1(ಎ) & (ಬಿ)	:	ಸಹಿಗಳು
ನಿಪಿ–2	:	ಬ್ಯಾಂಕಿನ ಹಿಂಬರಹ
ನಿಪಿ–3	:	ಲೀಗಲ್ ನೋಟೀಸ್
ನಿಪಿ–4	:	ವಾಪಸ್ಸು ಆದ ಅಂಚೆ ಲಕೋಟೆ
ನಿಪಿ–4(ಎ)	:	ಅಂಚೆ ಲಕೋಟೆ ಒಳಗೆ ಇದ್ದ ಲೀಗಲ್ ನೋಟೀಸ್
ನಿಪಿ–5 ರಿಂದ 10	:	ಪಹಣಿಗಳು
ನಿಪಿ–11	:	ಕೆನರಾ ಬ್ಯಾಂಕ್ ಪಾಸ್ ಬುಕ್

3. ಅಭಿಯೋಜನೆಯು ಮುದ್ದೆ ಮಾಲಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ

–ಇಲ್ಲ–

4. ಆರೋಪಿತರು ವಿಚಾರಣೆಗೆ ಒಳಪಡಿಸಿದ ಸಾಕ್ಷಿದಾರರ ಪಟ್ಟಿ

ಡಿಡಬ್ಲ್ಯೂ– 1	:	ಶ್ರೀ.ಶ್ರೀ ಹೆಚ್. ಕೆ ಎಹ್ತೆಷಾಮುಲ್ ಹಖ್

5. ಆರೋಪಿತರು ನಿಶಾನೆಯಾಗಿ ಗುರುತಿಸಿಕೊಂಡ ದಾಖಲಾತಿಗಳ ಪಟ್ಟಿ

– ಇಲ್ಲ –

(ಶಿವಕುಮಾರ ಜಿ.ಜಿ)
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಗುಂಡ್ಲುಪೇಟೆ.

Visit **ecourts.gov.in** for updates or download mobile app “**eCourts Services**” from Android or iOS